**ಸಾಕ್ಷಿಗೆ ದಿನಾಂಕಃ03-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. TRS ವಕೀಲರಿಂದ ::**

ದಾವಾ ಆಸ್ತಿಯಲ್ಲಿ ಒಂದು ವಾಸದ ಮನೆ ಇರುತ್ತದೆ ಎಂದರೆ ಸರಿ. ಸೊಕ್ಕೆ ಗ್ರಾಮ ಪಂಚಾಯಿತಿಗೆ ನಾನು 6 ತಿಂಗಳ ಹಿಂದೆ ವರ್ಗಾವಣೆ ಆಗಿರುತ್ತೇನೆ. ದಾವಾ ಶೆಡ್ಯೂಲ್ ಸ್ವತ್ತು ನಮ್ಮ ಪಂಚಾಯಿತಿಯಿಂದ ಅರ್ಧ ಕಿಮೀ ದೂರದಲ್ಲಿ ಇರುತ್ತದೆ. ದಾವಾ ಶೆಡ್ಯೂಲ್ ಸ್ವತ್ತು ನಮ್ಮ ಗ್ರಾಮದಿಂದ ತರೀಕೆರೆಗೆ ಬರುವ ಮುಖ್ಯ ರಸ್ತೆಯ ಬಲ ಭಾಗಕ್ಕೆ ಇರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ವಾದಿಗಳ ಕುಟುಂಬಸ್ಥರು ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಸರ್ವೇ ನಂಬರ್ ಮೂಲತಃ ಸರ್ಕಾರಿ ಗೋಮಾಳ ಆಗಿದ್ದರು ಎಂದರೆ ಸರಿ. ಸದರಿ ಸರ್ವೇ ನಂಬರ್ ಜಾಗಗಳನ್ನು ವಸತಿ ರಹಿತರಿಗೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾತಿ ಮಾಡಲು ಡಿಸಿ ರವರು ಆದೇಶದಂತೆ ಕಾಯ್ದಿರಿಸಲಾಗಿತ್ತು ಎಂದರೆ ಸರಿ. ಸದರಿ ಸ್ವತ್ತನ್ನು ಎಸಿ ರವರು ಅನುಮೋದನೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದ ಅನ್ವಯ ಪಂಚಾಯಿತಿಯ ಹೆಸರಿಗೆ ಸದರಿ ಸರ್ವೇ ನಂಬರ್ ಗಳು ಪಹಣಿಯು ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಬೆಳವಣಿಗೆ ನಡೆದ ನಂತರದಲ್ಲಿ ಪಂಚಾಯಿತಿಯಲ್ಲಿ ನಮ್ಮ ಗ್ರಾಮದಲ್ಲಿ ಇರುವ ಫಲಾನುಭವಿಗಳ ಪಟ್ಟಿ ತಯಾರಿಸಿ resolution ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಪಟ್ಟಿಯಲ್ಲಿ ವಾದಿಗಳು ಸಹ ಫಲಾನುಭವಿಗಳಾಗಿದ್ದರು ಎಂದರೆ ಸರಿ. ನಂತರದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಗಳಿಗೆ ಹಕ್ಕುಪತ್ರ ನೀಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಗಳು ಹಕ್ಕು ಪತ್ರದಲ್ಲಿನ ನಿಯಮಗಳನ್ನು ಪಾಲಿಸದ ಕಾರಣ ವಾದಿಗಳನ್ನು ಸೇರಿಸಿ ಇನ್ನು 35 ಜನಗಳ ಮಂಜೂರಾತಿ ಕುರಿತು ಮುಂದಿನ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಪಂಚಾಯಿತಿಯಿಂದ ವಾದಿಗಳಿಗೆ ಮಂಜೂರಾತಿ ರದ್ದತಿ ಕುರಿತು ಯಾವುದೇ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿ. ಪಂಚಾಯಿತಿಯಿಂದ ವಾದಿಗಳಿಗೆ ಹಕ್ಕು ಪತ್ರ ಕೊಟ್ಟ ಮಾರನೇ ದಿನ ಅವರು ಮನೆ ಕಟ್ಟಿ ಅಲ್ಲಿ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ನಮ್ಮ ಕಚೇರಿಗೆ ದಾವಾ ಶೆಡ್ಯೂಲ್ ಸ್ವತ್ತಿಗೆ ಕಂದಾಯ ಪಾವತಿ ಮಾಡಿರುತ್ತಾರೆ ಆದರೆ ಅದನ್ನು ತಪ್ಪಾಗಿ ತೆಗೆದುಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ನಮ್ಮ

ಪಂಚಾಯಿತಿಯಿಂದ ವಾದಿಗಳಿಗೆ ನೀಡಿರುವ ಹಕ್ಕುಪತ್ರವನ್ನು ರದ್ದು ಇವರೆಗೂ ಮಾಡಿರುವುದಿಲ್ಲ.

ವಾದಿಯಿಂದ 2011-12, 2013-14 ಸಾಲುಗಳಿಗೆ ಸಂಬಂಧಪಟ್ಟಂತೆ ನಿಪಿ.10 ಮತ್ತು 11 ರಂತೆ ಕಂದಾಯ ಸ್ವೀಕೃತಿ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಸದರಿ ದಾಖಲಾತಿಗಳಲ್ಲಿ assessment ನಂಬರ್ ನಮೂದು ಇರುವುದಿಲ್ಲ. ನಿಪಿ10 ಮತ್ತು 11 ರಲ್ಲಿ ಹಣವನ್ನು ಖಾತೆ ಬದಲಾವಣೆ ಬಾಬ್ತು ಕಟ್ಟಿಸಿಕೊಂಡಿರುತ್ತೇವೆ. ಸಾಕ್ಷಿಯು ಮುಂದುವರೆದು ಆದರೆ ವಾದಿಯ ಹೆಸರಿನಲ್ಲಿ ಯಾವುದೇ ಖಾತೆ ಬದಲಾವಣೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ ಪಕ್ಕದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಎನ್ನುವ ಸರ್ಕಾರಿ ಶಾಲೆ ಇರುತ್ತದೆ ಎಂದರೆ ಸರಿ. ಸದರಿ ಶಾಲೆ ಹಾಗೂ ದಾವಾ ಶೆಡ್ಯೂಲ್ ಸ್ವತ್ತು ಒಂದೇ ಸರ್ವೇ ನಂಬರ್ ನಲ್ಲಿ ಇರುತ್ತದೆ ಎಂದರೆ ಸರಿ. ರಾಜಕೀಯ ಪ್ರಭಾವಕ್ಕೆ ಒಳಪಟ್ಟು ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ವಾದಿಯ ಹೆಸರಿಗೆ ಬದಲಾವಣೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ 2015 ನೇ ಸಾಲಿನಲ್ಲಿ ನಮ್ಮ ಪಂಚಾಯಿತಿ ಅಧಿಕಾರಿಗಳು ವಾದಿಯ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಗ್ರಾಮಸ್ಥರ ಮನವಿ ಅನ್ವಯ ಕಾನೂನಿನ ರೀತ್ಯಾ ಕ್ರಮ ಕೈಗೊಂಡಿರುತ್ತೇವೆ ಎಂದು ನುಡಿಯುತ್ತಾರೆ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: